# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

ದಿನಾಂಕಃ06.11.2006ರಂದು ಮಧ್ಯಾಹ್ನ 12.00 ಗಂಟೆಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಅವರ ಕೊಠಡಿ ಸಂಖ್ಯೆ 38, ವಿಕಾಸಸೌಧದಲ್ಲಿ ನಡೆದ 4ನೇ ಆಡಳಿತ ಮಂಡಳಿಯ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು ಃ

1. **ಡಾ.ವಿ.ಎಸ್.ಆಚಾರ್ಯ** — ಅಧ್ಯಕ್ಷರು
   ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ

2. **ಶ್ರೀ.ಆಲ್ಕೋಡ್ ಹನುಮಂತಪ್ಪ** — ಉಪಾಧ್ಯಕ್ಷರು
   ಕ್ರೀಡಾ ಹಾಗೂ ಯುವಜನ ಖಾತೆ ಸಚಿವರು
   ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು,
   ಕರ್ನಾಟಕ ಸರ್ಕಾರ

3. **ಶ್ರೀ.ಹೆಚ್.ಗಣೇಶ ಮೂರ್ತಿ** — ಸದಸ್ಯರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಆರ್ಥಿಕ ಇಲಾಖೆ ಪರವಾಗಿ
   (ಉಪ ಕಾರ್ಯದರ್ಶಿಗಳು ವೆಚ್ಚ 5)

4. **ಶ್ರೀ.ಬಿ.ಎಲ್.ಸಿದ್ಧಯ್ಯ** — ಸದಸ್ಯರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಯೋಜನಾ ಇಲಾಖೆಯ ಪರವಾಗಿ
   (ಉಪ ನಿರ್ದೇಶಕರು)

5. **ಶ್ರೀ.ಮಾಜ್ ಅಹ್ಮದ ಷರೀಫ್** — ಸದಸ್ಯರು
   ಸರ್ಕಾರದ ಕಾರ್ಯದರ್ಶಿಗಳು
   ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಪರವಾಗಿ
   (ಜಂಟಿ ಕಾರ್ಯದರ್ಶಿಗಳು)

6. **ಡಾ.ರಮೇಶ್.ಎಸ್.** — ಸದಸ್ಯರು
   (ಜಂಟಿ ನಿರ್ದೇಶಕರು, ವೈದ್ಯಕೀಯ)
   ಆಯುಕ್ತರು
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪರವಾಗಿ

| | | |
|---|---|---|
| 7. | ಡಾ.ಪ್ರಭಾಕರನ್<br>ಮಾನ್ಯ ಕುಲಪತಿಗಳು<br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ | ಸದಸ್ಯರು |
| 8. | ಡಾ.ಎನ್.ಶ್ರೀನಿವಾಸನ್<br>(ಜಂಟಿ ನಿರ್ದೇಶಕರು, ವೈ.ಶಿ.)<br>ನಿರ್ದೇಶಕರು<br>ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಪರವಾಗಿ | ಸದಸ್ಯರು |
| 9. | ಶ್ರೀ.ಮಂಜುನಾಥ್ ಪ್ರಸಾದ್<br>ಕಾರ್ಯನಿರ್ವಾಹಕ ಅಧಿಕಾರಿಗಳು,<br>ಜಿಲ್ಲಾ ಪಂಚಾಯತ್ ರಾಯಚೂರು | ಸದಸ್ಯರು |
| 10. | ಡಾ.ಟಿ.ಎನ್.ನಟರಾಜ್<br>ವೈದ್ಯಕೀಯ ಅಧೀಕ್ಷಕರು, ರಾಯಚೂರು | ಸದಸ್ಯರು |
| 11. | ಶ್ರೀ.ಕಾಲೇಖಾನ್<br>ಕಾರ್ಯನಿರ್ವಾಹಕ ಅಭಿಯಂತರರು<br>ಲೋಕೋಪಯೋಗಿ ಇಲಾಖೆ, ರಾಯಚೂರು | ಸದಸ್ಯರು |
| 12. | ಶ್ರೀ.ಎ.ಪಾಪಾರೆಡ್ಡಿ<br>ಮಾನ್ಯ ಶಾಸಕರು<br>ರಾಯಚೂರು | ವಿಶೇಷ ಆಹ್ವಾನಿತರು |
| 13. | ಶ್ರೀ.ದುರ್ಗಾರಾವ್<br>ಗುತ್ತೇದಾರರು<br>ಹಯಗ್ರೀವ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಂಪೆನಿ<br>ರಾಯಚೂರು | ವಿಶೇಷ ಆಹ್ವಾನಿತರು |
| 14. | ಡಾ.ಎಂ.ಆರ್.ಚಂದ್ರಶೇಖರ್<br>ಪ್ರಭಾರೆ ನಿರ್ದೇಶಕರು ಹಾಗೂ<br>ಪ್ರಾಂಶುಪಾಲರು<br>ರಾಯಚೂರು | ಸದಸ್ಯ ಕಾರ್ಯದರ್ಶಿಗಳು |

.......3

ಸಭಾ ನಡವಳಿಗಳು

1. **ಕಟ್ಟಡ ಕಾಮಗಾರಿ ಬಗ್ಗೆ :** ಈಗಾಲೇ ವೈದ್ಯಕೀಯ ಮಹಾವಿದ್ಯಾಲಯದ ಮೊದಲನೇ ಹಂತದ ಕಟ್ಟಡ ಕಾಮಗಾರಿಯ ಬಹುತೇಕ ಕೆಲಸಗಳು ಮುಗಿದಿದ್ದು, ಬಾಕಿ ಇರುವ ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಗುತ್ತೇದಾರರಿಗೆ ಹಾಗೂ ಕಾಮಗಾರಿ ಪರಿಶೀಲನಾ ಇಲಾಖೆ ಲೋಕೋಪಯೋಗಿ, ರಾಯಚೂರು ಇವರಿಗೆ ಮಾನ್ಯ ಅಧ್ಯಕ್ಷರು ಸಲಹೆ ನೀಡಿದರು.

2. **ಕಾಮಗಾರಿಯ ಹಣ ಪಾವತಿ ಬಗ್ಗೆ :** ನೂತನವಾಗಿ ನಿರ್ಮಿಸಲ್ಪಡುತ್ತಿರುವ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡ ಕಾಮಗಾರಿ ಹಾಗೂ ಹಾಸ್ಟೆಲ್ ಕಟ್ಟಡ ಹಾಗೂ ಇನ್ನಿತರ ಕಾಮಗಾರಿಗೆ ವಿನ್ಯಾಸ ಹಾಗೂ ಇನ್ನಿತರ ಸಣ್ಣಪುಟ್ಟ ಬದಲಾವಣೆಯಿಂದಾಗಿ ಬದಲಿ ಹಾಗೂ ಪರ್ಯಾಯವಾಗಿ ನಿರ್ಮಿಸಲಾದ ಕಾಮಗಾರಿ ಪಟ್ಟಿಯನ್ನು EIRL ಹಾಗೂ ವರ್ಕ್‌ಸ್ಲಿಪ್ ಸಿದ್ಧಪಡಿಸಿ, ಈಗಾಗಲೇ ಹೆಚ್ಚಿನ ಅನುದಾನಕ್ಕಾಗಿ ಆಡಳಿತಾತ್ಮಕ ಮಂಜೂರಾತಿ ಪಡೆಯಲು ಸಮುಚಿತ ಮಾರ್ಗವಾಗಿ ಹಿರಿಯ ಅಧಿಕಾರಿಗಳಿಗೆ ಲೋಕೋಪಯೋಗಿ ಇಲಾಖೆ, ರಾಯಚೂರು ಇವರ ವತಿಯಿಂದ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೂಡಲೇ ಒಟ್ಟಾರೆ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಅನುದಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿ, ಕಾಮಗಾರಿಯ ಹೆಚ್ಚಳದ ಹಣವನ್ನು ಪ್ರತಿಶತ 100ರಷ್ಟು ಸಂಪೂರ್ಣವಾಗಿ ಬಿಡುಗಡೆಗೊಳಿಸುವಂತೆ ಆರ್ಥಿಕ ಇಲಾಖೆಯ ಉಪಕಾರ್ಯದರ್ಶಿ (ವೆಚ್ಚ 5) ಇವರಿಗೆ ಮಾನ್ಯ ಅಧ್ಯಕ್ಷರು ಆದೇಶ ನೀಡಿದರು.

3. **ಎರಡನೇ ಹಂತದ ಕಾಮಗಾರಿ :**

ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರವು ರೂ.40 ಕೋಟಿ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಅದಕ್ಕೆ ತಕ್ಕಂತೆ ಈ ಕೆಳಕಂಡ ಕಾಮಗಾರಿಗಳನ್ನು ಅಳವಡಿಸಿ, ಈಗಾಗಲೇ ಸಂಬಂಧಿಸಿದ ಲೋಕೋಪಯೋಗಿ ಇಲಾಖೆ, ರಾಯಚೂರು ಇವರು ಅಂದಾಜು ಪತ್ರಿಕೆ ತಯಾರಿಸಿ ತಾಂತ್ರಿಕ ಮಂಜೂರಾತಿ ಪಡೆಯಲು ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಉತ್ತರ ವಲಯ, ಧಾರವಾಡ ಇವರಿಗೆ ಸಲ್ಲಿಸಿರುವುದಾಗಿ ತಿಳಿಸಿದರು. ಮಾನ್ಯ ಅಧ್ಯಕ್ಷರು, ಕೂಡಲೇ ಸಂಬಂಧಿಸಿದ ಇಲಾಖೆಯವರಿಗೆ 2ನೇ ಹಂತದ ಕಾಮಗಾರಿಗಾಗಿ ಟೆಂಡರ್ ಕರೆದು ಕಾಮಗಾರಿ

..........4

ಪ್ರಾರಂಭಿಸಲು ಸೂಚನೆ ನೀಡಿದರು. ಹಾಗೂ ಈಗಾಗಲೇ ಸದರಿ ವೈದ್ಯಕೀಯ ಕಾಲೇಜಿನ ಕಟ್ಟಡಕ್ಕೆ ಹೊಂದಿಕೊಂಡಂತೆ ನೂತನವಾಗಿ 500 ಹಾಸಿಗೆಯ ಹೊಸ ಆಸ್ಪತ್ರೆ ನಿರ್ಮಿಸಲು ಸರ್ಕಾರವು ಮಂಜೂರಾತಿ ನೀಡ್ಡಿದ ಕಾಮಗಾರಿಗೆ ರೂ.40 ಕೋಟಿಯಷ್ಟು ಅನುದಾನ ಒದಗಿಸಿದ್ದು, ಅದರ ನಿರ್ಮಾಣಕ್ಕಾಗಿ ಗುರುತಿಸಲಾದ ಜಮೀನನ್ನು (27 ಎಕರೆ) ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರದಿಂದ ದಿನಾಂಕ : 12.10.2006ರಂದು 6(1) ನೋಟಿಫಿಕೇಶನ್ ಹೊರಡಿಸಿದ್ದು, ಕೂಡಲೇ ಆಸ್ಪತ್ರೆ ಕಟ್ಟಡ ನಿರ್ಮಿಸಲು ಮುಖ್ಯ ವಾಸ್ತುಶಿಲ್ಪಿ ಇವರಿಂದ ವಿನ್ಯಾಸ ಪಡೆದು ಅಂದಾಜು ಪತ್ರಿಕೆ ತಯಾರಿಸಿ ಟೆಂಡರ್ ಕರೆಯುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸಲಹೆ ನೀಡಿದರು.

4. **2ನೇ ಹಂತದ ಕಾಮಗಾರಿಗಳ ವಿವರ :**

* ಕಾಲೇಜು ಕಟ್ಟಡ:ಮೂರನೇ ಮಹಡಿಯಲ್ಲಿ ಮೂರು ಲೆಕ್ಚರ್‌ಗ್ಯಾಲರಿ ಹಾಗೂ ಆಡಿಟೋರಿಯಂ
* ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಸತಿಗೃಹ (ಹಾಸ್ಟೆಲ್) : ಎರಡನೆಯ ಮಹಡಿಯಿಂದ ಐದನೆಯ ಮಹಡಿಯವರೆಗೆ
* ವೈದ್ಯಕೀಯ ಬೋಧಕ ಸಿಬ್ಬಂದಿ ವಸತಿಗೃಹ : ಎರಡನೆಯ ಮಹಡಿಯಿಂದ ಐದನೆಯ ಮಹಡಿವರೆಗೆ
* ಶುಶ್ರೂಷಕ ಸಿಬ್ಬಂದಿ ವಸತಿಗೃಹ : ನೆಲಮಹಡಿಯಿಂದ ಏಳನೇ ಮಹಡಿಯವರೆಗೆ ಒಟ್ಟಾರೆ 28 ವಸತಿಗೃಹಗಳನ್ನು ನೂತನವಾಗಿ ನಿರ್ಮಿಸುವುದು.
* ರೆಸಿಡೆಂಟ್ ಕ್ವಾರ್ಟರ್ಸ್ : ನೆಲಮಹಡಿಯಿಂದ ಏಳನೆಯ ಮಹಡಿಯವರೆಗೆ 32 ವಸತಿಗೃಹಗಳನ್ನು ಒಳಗೊಂಡ ಒಂದು ಬ್ಲಾಕ್.
* ವೈದ್ಯಕೀಯ ಮಹಾವಿದ್ಯಾಲಯ ಆವರಣದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸುವುದು.
* ವೈದ್ಯಕೀಯ ಮಹಾವಿದ್ಯಾಲಯಕ್ಕೆ ರಾಜ್ಯ ಹೆದ್ದಾರಿಯಿಂದ ನೂತನ ಕೂಡುರಸ್ತೆ ಹಾಗೂ ಆವರಣದಲ್ಲಿಯ ಒಳರಸ್ತೆಗೆ ಡಾಂಬರೀಕರಣ ಹಾಗೂ ಚರಂಡಿಗಳ ನಿರ್ಮಾಣ
* ಆವರಣದಲ್ಲಿ ಉದ್ಯಾನವನ (ಲ್ಯಾಂಡ್‌ಸ್ಕೇಪಿಂಗ್) ಹಾಗೂ ಇನ್ನುಳಿದ ಕಾಮಗಾರಿಗಳಿಗಾಗಿ ಒಟ್ಟಾರೆ ಅನುದಾನ ಒದಗಿಸಲಾಗಿದೆ.

.........5

5. **ವೈದ್ಯಕೀಯ ತ್ಯಾಜ್ಯವಸ್ತುಗಳ ವಿಲೇವಾರಿ ಘಟಕ** (Disposal of Bio-Medical Waste): ಆಸ್ಪತ್ರೆಯ ಆವರಣದಲ್ಲಿ ವೈದ್ಯಕೀಯ ತ್ಯಾಜ್ಯವಸ್ತುಗಳ ವಿಲೇವಾರಿ ಘಟಕದ ನಿರ್ಮಾಣ ಸಾಧ್ಯವಿಲ್ಲದ್ದರಿಂದ ಹೊರಗುತ್ತಿಗೆ (Outsource) ಆಧಾರದ ಮೇಲೆ ತಾಜ್ಯವಸ್ತುಗಳ ವಿಲೇವಾರಿ ಮಾಡಲು ಸಭೆಯು ತೀರ್ಮಾನಿಸಿತು.

6. **ಮಾದರಿ ದೋಬಿ ಘಾಟ್** (Modern Laundry Unit) : ಆಸ್ಪತ್ರೆಯಲ್ಲಿ ದೋಬಿ ಘಾಟ್‌ನ ಸರಿಯಾದ ವ್ಯವಸ್ಥೆ ಇಲ್ಲದೇ ಇರುವುದರಿಂದ, ಹೊರಗುತ್ತಿಗೆ ಆಧಾರದ (Outsource) ಮೇಲೆ ನಿರ್ವಹಿಸಲು ಸಭೆಯು ಅನುಮೋದನೆ ನೀಡಿತು.

7. ನೂತನವಾಗಿ ಪ್ರಾರಂಭಿಸುತ್ತಿರುವ ಆಸ್ಪತ್ರೆ ಕಟ್ಟಡದಿಂದಾಗಿ ಈಗಿರುವ ಜಿಲ್ಲಾ ಆಸ್ಪತ್ರೆಗೆ ಯಾವುದೇ ಅನುದಾನ ಲಭ್ಯವಿಲ್ಲದ ಕಾರಣ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಶಸ್ತ್ರಚಿಕಿತ್ಸಕರು ಹಾಗೂ ವೈದ್ಯಕೀಯ ಅಧೀಕ್ಷಕರು ಇವರ ಕೋರಿಕೆಯಂತೆ, ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪ್ರಭಾರೆ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಇವರಿಗೆ ಮಾನ್ಯ ಅಧ್ಯಕ್ಷರು ಮೊದಲನೇ ವರ್ಷದ ಕಾಲೇಜು ಪ್ರಾರಂಭಕ್ಕೆ ಅನುಕೂಲವಾಗುವಂತೆ ಹಾಗೂ ಭಾರತೀಯ ವೈದ್ಯಕೀಯ ಮಂಡಳಿ ತಪಾಸಣೆ/ವೀಕ್ಷಣೆ ಸಂದರ್ಭಕ್ಕೆ ಬೇಕಾಗುವ ಕೆಲವು ಅಗತ್ಯತೆಗಳನ್ನು ರೂ.20 ಲಕ್ಷಕ್ಕೆ ಮೀರದಂತೆ ಸೀಮಿತಗೊಳಿಸಿ ಅವಶ್ಯ ಕಾಮಗಾರಿ ಕೈಗೊಳ್ಳುವಂತೆ ಸಭೆಯಲ್ಲಿ ಅನುಮೋದನೆ ನೀಡಿದರು ಹಾಗೂ ಎಂ.ಸಿ.ಐ.ನಿಯಮಾವಳಿಯ ಪ್ರಕಾರ ಆಸ್ಪತ್ರೆಯ ಒಳ ಮತ್ತು ಹೊರರೋಗಿ, ವೈದ್ಯಕೀಯ ದಾಖಲೆ ವಿಭಾಗ ಇನ್ನಿತರೆ ಅವಶ್ಯ ವಿಭಾಗಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲು ಸಹ ಸಭೆಯಲ್ಲಿ ಅನುಮೋದನೆ ನೀಡಲಾಯಿತು. ನೇಮಕಾತಿ ನಿಯಮಗಳನ್ನು ಅನುಸರಿಸಿ ಅಗತ್ಯ ಸಿಬ್ಬಂದಿಯ ನೇಮಕಾತಿ ಮಾಡಲು ಸಹ ಸೂಚಿಸಲಾಯಿತು.

8. **ಬೋಧಕ ಸಿಬ್ಬಂದಿಗಳ ನೇಮಕಾತಿ ಬಗ್ಗೆ :**

ಈಗಾಗಲೇ ವೈದ್ಯಕೀಯ ಮಹಾವಿದ್ಯಾಲಯದ ಚಾಲನೆಗಾಗಿ ಪ್ರಥಮ ವರ್ಷಕ್ಕೆ ಅವಶ್ಯವಿರುವ ಬೋಧಕ ಸಿಬ್ಬಂದಿಗಳ ನೇಮಕಾತಿ ಮಾಡಿಕೊಂಡಿರುವುದಕ್ಕೆ ಘಟನೋತ್ತರ ಮಂಜೂರಾತಿಯನ್ನು ಸಭೆಯು ಸರ್ವಸಮ್ಮತದಿಂದ ಅನುಮೋದನೆ ನೀಡಿತು.

........6

9. **ಬಾಕಿ ಹುದ್ದೆಗಳ ನೇಮಕಾತಿ ಬಗ್ಗೆ :**

ವೈದ್ಯಕೀಯ ಮಹಾವಿದ್ಯಾಲಯದ ಚಾಲನೆಗಾಗಿ ಪ್ರಥಮ ವರ್ಷಕ್ಕೆ ಅತೀ ಅವಶ್ಯಕತೆ ಇರುವ ಬೋಧಕ, ಬೋಧಕೇತರ, ತಾಂತ್ರಿಕ ಹಾಗೂ ಇತರ ಹುದ್ದೆಗಳಿಗೆ ತ್ವರಿತವಾಗಿ ಸಂಸ್ಥೆಯ ಬೈಲಾದ ನಿಯಮಾವಳಿ ಪ್ರಕಾರ ನೇಮಕಾತಿ ಮಾಡಿಕೊಳ್ಳಲು ಮತ್ತು ಇವುಗಳನ್ನು ಹೊರತುಪಡಿಸಿ ಗ್ರೂಪ್ - ಸಿ ಮತ್ತು ಗ್ರೂಪ್ - ಡಿ ಹುದ್ದೆಗಳನ್ನು ಹೊರಗುತ್ತಿಗೆ (Outsource) ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸಭೆ ಅನುಮೋದನೆ ನೀಡಿತು.

10. **ಟ್ಯೂಟರ್ಸ್, ಸೀನಿಯರ್ ರೆಸಿಡೆಂಟ್ ಹಾಗೂ ಜೂನಿಯರ್ ರೆಸಿಡೆಂಟ್ ಹುದ್ದೆಗಳ ನೇಮಕಾತಿ ಬಗ್ಗೆ :** ಈಗಾಗಲೇ ವೈದ್ಯಕೀಯ ಮಹಾವಿದ್ಯಾಲಯದ ಚಾಲನೆಗಾಗಿ ಪ್ರಥಮ ವರ್ಷಕ್ಕೆ ಅವಶ್ಯವಿರುವ ಟ್ಯೂಟರ್ಸ್, ಸೀನಿಯರ್ ರೆಸಿಡೆಂಟ್ ಹಾಗೂ ಜೂನಿಯರ್ ರೆಸಿಡೆಂಟ್ ಹುದ್ದೆಗಳಿಗೆ ನೇಮಕಾತಿಗಾಗಿ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ರೂ.10,500/- ಮಾಹೆಯಾನದಂತೆ ನೇಮಕಾತಿ ಮಾಡಲು ಸಭೆಯು ಅನುಮೋದನೆ ನೀಡಿತು.

11. **ಬೋಧಕ ಸಿಬ್ಬಂದಿಗಳ ವೇತನದ ಬಗ್ಗೆ :** ಈಗಾಗಲೇ ಸರ್ಕಾರಿ ಆದೇಶದ ಸಂಖ್ಯೆ: ಆ.ಕು.ಕ 207 /ಎಂ.ಎಂ.ಸಿ./2006 ದಿನಾಂಕ : 19.10.2006ರ ಪ್ರಕಾರ ಪ್ರೀ-ಕ್ಲಿನಿಕಲ್, ಪ್ಯಾರಾ ಕ್ಲಿನಿಕಲ್, ಅರವಳಿಕೆ ಹಾಗೂ ಕ್ಷ-ಕಿರಣ ವಿಭಾಗದ ಬೋಧಕ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸಲಾಗಿದ್ದು, ಅದರ ಪ್ರಕಾರ ವೇತನ ಪಾವತಿಸಲು ಸಭೆಯು ಅನುಮೋದನೆ ನೀಡಿತು.

12. **ಸಂಸ್ಥೆಯ ಖರ್ಚುವೆಚ್ಚದ ಬಗ್ಗೆ :** ಈಗಾಗಲೇ ಈ ಸಂಸ್ಥೆಗೆ ಬಿಡುಗಡೆಯಾದ ಕಟ್ಟಡ ಕಾಮಗಾರಿಯ ಅನುದಾನ, ಉಪಕರಣ ಖರೀದಿಯ ಒಟ್ಟಾರೆ ಮೊತ್ತ ರೂ.3.25 ಕೋಟಿ ಯಲ್ಲಿ ಈಗಾಗಲೇ ರೂ.1.50 ಕೋಟಿ ಯಷ್ಟು ಖರೀದಿಸಿದ ಉಪಕರಣಗಳ (ಪೀಠೋಪಕರಣ ಹಾಗೂ ವೈದ್ಯಕೀಯ ಯಂತ್ರೋಪಕರಣ) ಮತ್ತು ಸಿಬ್ಬಂದಿಯ ವೇತನ ಇನ್ನಿತರೆ ಅನುದಾನದ ವೆಚ್ಚದ ವಿವರಗಳಿಗೆ ಸಭೆಯು ಅನುಮೋದನೆ ನೀಡಿ ಪ್ರಥಮ ಹಂತದ ಬಾಕಿ ಉಳಿದಿರುವ ಒಟ್ಟಾರೆ ಅನುದಾನವನ್ನು ಬಿಡುಗಡೆ ಮಾಡುವಂತೆ ಸಭೆಯಲ್ಲಿ ಹಾಜರಿದ್ದ ಆರ್ಥಿಕ ಇಲಾಖೆಯ ಉಪಕಾರ್ಯದರ್ಶಿ ಇವರಿಗೆ ಶೀಘ್ರವೇ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

........7

13. ಕೊನೆಯದಾಗಿ ಮಂಡಳಿಯ ಅಧ್ಯಕ್ಷರು ವೈದ್ಯಕೀಯ ಮಹಾವಿದ್ಯಾಲಯದ ಚಾಲನೆಗೆ ಅವಶ್ಯವಿರುವ ಎಲ್ಲಾ ಬೋಧಕ ಸಿಬ್ಬಂದಿ ನೇಮಕಾತಿ, ಪೀಠೋಪಕರಣ ಹಾಗೂ ಯಂತ್ರೋಪಕರಣ ಹಾಗೂ ಇನ್ನಿತರ ಅವಶ್ಯಕ ಲೇಖನ ಸಾಮಾಗ್ರಿ ಹಾಗೂ ಇತರೆ ಅವಶ್ಯವುಳ್ಳ ಸಾಮಾಗ್ರಿಗಳನ್ನು ಖರೀದಿ ನಿಯಮಾವಳಿಗಳನ್ನು ಅನುಸರಿಸಿ ಖರೀದಿಸಲು ಸೂಚಿಸಿ, ಪ್ರಥಮ ವರ್ಷದ ಅನುಮತಿಗಾಗಿ ಭಾರತೀಯ ವೈದ್ಯಕೀಯ ಮಂಡಳಿ (ಎಂ.ಸಿ.ಐ.) ತಂಡವನ್ನು ವೀಕ್ಷಣೆಗಾಗಿ ಆಹ್ವಾನಿಸುವಂತೆ ಸಂಸ್ಥೆಯ ಪ್ರಭಾರೆ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಇವರಿಗೆ ಸಭಾಧ್ಯಕ್ಷರು ಸೂಚನೆ ನೀಡಿದರು.

(ಡಾ.ವಿ.ಎಸ್.ಆಚಾರ್ಯ)
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ
ಆಡಳಿತ ಮಂಡಳಿಯ ಅಧ್ಯಕ್ಷರು
ರಾ..ವೈ.ವಿ.ಸಂಸ್ಥೆ, ರಾಯಚೂರು

ಸರ್ಕಾರದ ಜಂಟಿ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)